ANUBHAVS



# ಜೀವನ ದಾನ

© Copyright 2010, Manasamarthyadata.com

manasamarthyadata.com



*- ಸೌ.ವೀಣಾ (ವಿಜಯ) ಜೋಶಿ, ಠಾಣೆ*

ಈ ಘಟನೆ ಜರಗಿದುದು 2004 ಬುಧವಾರ ಬೆಳಿಗ್ಗೆ 8 ಘಂಟೆಗೆ ಸಂದೀಪ (ನನ್ನ ಮಗ) ಪ್ರೆಸ್‌ಗೆ ಹೋಗುವುದಕ್ಕಾಗಿ ಲಿಫ್ಟ್‌ನಿಂದ ಕೆಳಗಿಳಿದನು. ಲಿಫ್ಟ್‌ನಿಂದ ಹೊರ ಬರುತ್ತಿದ್ದಂತೆಯೇ ಹೊರಗಡೆ ನಿಂತಿದ್ದ ಮಿತ್ರನನ್ನು ನೋಡಿ ಸಂದೀಪ ಅರೇ ಬಾರಯ್ಯಾ 5 ನಿಮಿಷ ಮೇಲೆ ಹೋಗಿ ಬರೋಣ. ಸ್ವಲ್ಪ ಚಹಾ ಕುಡಿದು ಕೂಡಲೇ ಹೊರಡುವಾ ಎಂದನು. ಅದಕ್ಕೆ ಅವನ ಮಿತ್ರ ಅರೇ ಬೇಡ ಸಂದೀಪ, ನಾನು ಮೊದಲೇ ತುಂಬಾ ಅವಸರದಲ್ಲಿದ್ದೇನೆ. ಆದರೆ ಟ್ರಾಫಿಕ್‌ನಿಂದಾಗಿ ಅಲ್ಲಿಗೆ ಸ್ಕೂಟರ್ ಕೊಂಡು ಹೋಗುವುದು ಸಾಧ್ಯವಿಲ್ಲ. ನೀನು ನನ್ನ ಸ್ಕೂಟರ್ ತೆಗೆದುಕೊಂಡು ಪ್ರೆಸ್‌ಗೆ ಹೋಗು. ನಾನು ನನಗೆ ಸಾಧ್ಯವಾದಾಗ ಅಲ್ಲಿಗೆ ಬಂದು ಕೊಂಡು ಹೋಗುತ್ತೇನೆ ಎಂದು ಹೇಳಿದರು. ಸಂದೀಪನು ಮಿತ್ರನಿಂದ ಅವನ ಸ್ಕೂಟರ್‌ನ ಕೀಯನ್ನು ತೆಗೆದುಕೊಂಡನು ಹಾಗೂ ಅವನ ಮಿತ್ರ ಕಾಲ್ನಡಿಗೆಯಲ್ಲೇ ವಿಜಯ ನಗರದ ಕಡೆಗೆ ಹೊರಟನು.

ಸಂದೀಪನು ಸ್ಕೂಟರ್‌ಗೆ ಕೀ ತಾಗಿಸಲೆಂದು ಮುಂದಾದಾಗ ಸಹಜವಾಗಿ ಅವನ ದೃಷ್ಟಿ ಸ್ಕೂಟರ್‌ನ ಕನ್ನಡಿಯ ಮೇಲೆ ಬಿದ್ದಿತು. ಆಗ ಯಾರೋ ಸ್ಕೂಟರ್ ಸ್ಟಾರ್ಟ್ ಮಾಡಬೇಡ ಎಂಬರ್ಥದಲ್ಲಿ ಕೈಯಾಡಿಸಿದಂತೆನಿಸಿತು. ಸಂದೀಪನು ತಿರುಗಿ ಅಕ್ಕ ಪಕ್ಕದಲ್ಲಿ ಕಣ್ಣಾಡಿಸಿದನು. ಆದರೆ ಅವನಿಗೆ ಯಾರೂ ಕಾಣಿಸಲಿಲ್ಲ. ಅವನು ಪುನಃ ಕೀ ತಾಗಿಸಲು ಮುಂದಾದಾಗ ಕನ್ನಡಿಯಲ್ಲಿ ಸದ್ಗುರು ಬಾಪೂರವರು ಕಾಣಿಸಿಕೊಂಡು ಸ್ಕೂಟರ್ ಸ್ಟಾರ್ಟ್ ಮಾಡಬೇಡ ಎಂದು ಕೈಸನ್ನೆ ಮಾಡಿದರು. ಸಂದೀಪ್ ಪುನಃ ತಿರುಗಿ ಅಕ್ಕ-ಪಕ್ಕದಲೆಲ್ಲಾ ನೋಡಿದರೂ ಕೂಡಾ ಯಾರೂ ಕಾಣಿಸಲಿಲ್ಲ. ಆದರೂ ಕೂಡಾ ಸಂದೀಪ್‌ನಿಗೆ ಏನೋ ಅವಾಂತರವಿದೆ ಎಂದು ತಿಳಿಯಿತು. ಸಂದೀಪ್ ಹಿಂದೆ ತಿರುಗಿ ನೋಡಿದಾಗ ಅವನ ಮಿತ್ರ ಸುಮಾರು 10-12 ಹೆಜ್ಜೆ ಮುಂದೆ ಹೋಗಿದ್ದನು.

ಸಂದೀಪ್ ಅವನನ್ನುದ್ದೇಶಿಸಿ ನಾನು ಸ್ಕೂಟರ್ ಕೊಂಡು ಹೋಗುವುದಿಲ್ಲ, ಏನೋ ಗಡ್‌ಬಡ್ ಇದೆ ಎಂದು ಹೇಳಿ ಅವನಿಗೆ ಕೀಯನ್ನು ಹಿಂತಿರುಗಿಸಿ ಬಂದು, 5 ಹೆಜ್ಜೆಗಳಷ್ಟು ನಡೆದಿರಬಹುದು ಅಷ್ಟರಲ್ಲಿ ವೇಗದಿಂದ ಬಂದ ಫಿಯೇಟ್ ಕಾರೊಂದು ಆ ಸ್ಕೂಟರ್‌ಗೆ ಜೋರಾಗಿ ಅಪ್ಪಳಿಸಿತು.

ಇವರಿಬ್ಬರೂ ನೋಡುತ್ತಿರುವಂತೆಯೇ ಸ್ಕೂಟರ್ ಮೇಲಕ್ಕೆ ಹಾರಿ ಕೆಳಗೆ ಬಿದ್ದು ನುಚ್ಚು ನೂರಾಯಿತು.

ಸಂದೀಪ್ ಪ್ರತಿದಿನ ಮನೆಗೆ ಬಂದವನು ಕೈಕಾಲು ತೊಳೆದು ದೇವರೆದುರಿಗೆ ಊದುಬತ್ತಿ ಹೊತ್ತಿಸಿಟ್ಟು ನಮಸ್ಕರಿಸಿ ನಂತರ ಬಾಪೂರವರ ಪ್ರಾರ್ಥನೆಯನ್ನು ಮಾಡುತ್ತಾನೆ ಹಾಗೂ ಇದಾದ ನಂತರ ನಾವು ಊಟಕ್ಕೆ ಕುಳಿತುಕೊಳ್ಳುತ್ತೇವೆ. ಅಂದೂ ಕೂಡಾ ನಾನು ಎಲ್ಲಾ ತಯಾರಿ ನಡೆಸಿ ಸಂದೀಪ್ ಬಾ ಊಟ ಮಾಡುವಾ ಎಂದು ಅವನನ್ನು ಕರೆಯುತ್ತಿದ್ದರೂ ಕೂಡಾ ಅವನು ಅದನ್ನು ಕೇಳಿಸಿಕೊಳ್ಳದೇ ಸತತವಾಗಿ ಪ್ರದಕ್ಷಿಣೆ ಹಾಕುತ್ತಿದ್ದನು.

ಇದನ್ನು ನೋಡಿದ ನಾನು ಅರೇ ಊಟಕ್ಕೆ ಬಾರೋ ಎಂದು ಸ್ವಲ್ಪ ಜೋರಾಗಿಯೇ ಹೇಳಿದೆನು. ಆಗ ಮಾತ್ರ ಅವನು ಊಟದ ತಟ್ಟೆಯದುರಿಗೆ ಬಂದು ಕುಳಿತನು. ಆದರೆ ಊಟದ ಕಡೆಗೆ ಅವನ ಗಮನವಿರಲಿಲ್ಲ. ತುಂಬಾ ಅಸ್ವಸ್ಥನಾಗಿರುವಂತೆ ಕಾಣುತ್ತಿತ್ತು. ನಾನು ಅವನನ್ನು ತಟ್ಟಿ ಅರೇ ಊಟ ಮಾಡಪ್ಪಾ ಏನಾಯಿತು? ಈವತ್ತು ಊಟದ ಕಡೆಗೆ ನಿನ್ನ ಗಮನವಿಲ್ಲ ಯಾಕೆ? ಪ್ರೆಸ್‌ನಲ್ಲಿ ಯಾರೊಂದಿಗಾದರೂ ಜಗಳವಾಯಿತೇ? ಎಂದು ಕೇಳಿದೆ ಅಷ್ಟೆ ಅವನು ನನ್ನತ್ತ ದಿಟ್ಟಿಸಿದವನೇ ಗಳಗಳನೇ  ಅಳತೊಡಗಿದನು. ನಾನು ಇದುವರೆಗೆ ಒಮ್ಮೆಯೂ ಸಂದೀಪ್‌ನನ್ನು ಈ ಅವಸ್ಥೆಯಲಲಿ ನೋಡಿದ ನೆನಪಿಲ್ಲ. ನಾನು ಅವನನ್ನು ಜೋರಾಗಿ ಅಲುಗಾಡಿಸಿ ಅರೇ, ಹೇಳಲ್ಲ ಏನಾಯಿತು? ಎರಡು ನಿಮಿಷಗಳವರೆಗೆ ಅವನು ಸುಮ್ಮನಿದ್ದನು. ಆಗ ಕಾಕಾ ನನ್ನನ್ನು ಸುಮ್ಮನಿರು ಎಂದು ಕೈ ಸನ್ನೆಯಿಂದ ಹೇಳಿದರು. ನಂತರ ಅವನು ಹೇಳಲು ಶುರು ಮಾಡಿದನು. ಅಮ್ಮಾ ಇಂದಿನ ಇಡೀ ದಿನ ಹೇಗೆ ಕಳೆಯಿತೆಂಬುದೇ ನನಗೆ ತಿಳಿಯುತ್ತಿಲ್ಲ ಎಂದು ಶುರುಮಾಡಿ ಬೆಳಿಗ್ಗೆ ನಡೆದ ಎಲ್ಲಾ ವಿಷಯವನ್ನು ಕೂಲಂಕುಶವಾಗಿ ಹೇಳಿ ಮುಗಿಸಿದನು. ಅಮ್ಮಾ ಸದ್ಗುರು ಬಾಪೂರವರು ನನಗೆ ದರ್ಶನ ನೀಡಿ ಕೈಸನ್ನೆಯಿಂದ ನನ್ನನ್ನು ತಡೆಯದೇ ಇರುತ್ತಿದ್ದರೆ ಇಂದು ನಾನು.....ಎಂದು ಹೇಳಿ ಅವನು ಸುಮಾರು 5 ನಿಮಿಷಗಳವರೆಗೆ ಅಳುತ್ತಿದ್ದನು. ಆಗಾ ಕಾಕಾ ನನಗೆ ‘ಅವನು ಅತ್ತು ಸ್ವಲ್ಪ ಶಾಂತನಾಗಲಿ, ತಡೆಯಬೇಡ’ ಎಂದರು. ಸ್ವಲ್ಪ ಹೊತ್ತಿನ ನಂತರ ಅವನು ಶಾಂತನಾದಾಗ ನಾನವನಿಗೆಂದೆ  ಭಯ ಪಡಬೇಡ, ಬಾಪೂ ನಿನ್ನ ಬೆಂಗಾವಲಿಗಿದ್ದಾರೆ.

ANUBHAVS

# HARI OM

© Copyright 2010, Manasamarthyadata.com

manasamarthyadata.com